ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 181 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 19.01.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 181 • PRGI No:KARKAN/2023/88055 • VIJAYANAGARA • 19.01.2025 • Sunday • Page:04 • Rs:2

Many audiences find print more trustworthy than digital.
Print offers permanence and tangibility that enhance brand credibility and build consumer trust.

1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038

ಗುರುಃ ಬ್ರಹ್ಮಾ ಗುರುಃ ವಿಷ್ಣು, ಗುರುಃ ದೇವೋ ಮಹೇಶ್ವರಃ । ಗುರುಃ ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀಗುರವೇ ನಮಃ ॥

ಗುರುವಂದನೆ ಸಮಾರಂಭ & ಸ್ನೇಹಿತರ ಪುನರ್ಮಿಲನ

1996 ಬಿ.ಎ., ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ

ಸ್ಥಳ: ಮಲ್ಲಿಗೆ ಹೋಟೆಲ್, ಹೊಸಪೇಟೆ, ವಿಜಯನಗರ | 1996ರ ಬಿಎ ಸ್ನೇಹಿತರಿಗೆ ಸ್ವಾಗತ-ಸುಸ್ವಾಗತ | ದಿನಾಂಕ: 19-01-2025, ಭಾನುವಾರ, ಬೆಳಿಗ್ಗೆ 9 ರಿಂದ

ಮೈಕ್ರೋ ನ್ಯೂಸ್

ಜ.21 ರಂದು ಜಿಲ್ಲಾ ಮಟ್ಟದ ಸಿರಿಧ್ಯಾನ ನಡಿಗೆ

ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯಲ್ಲಿ ಜ.21 ರಂದು ಬೆ.7 ಗಂಟೆಗೆ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಆಚರಣೆ ನಿಮಿತ್ತ ಸಿರಿಧಾನ್ಯ ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಬಿ.ಶರಣಪ್ಪ ಮುದಗಲ್ ತಿಳಿಸಿದ್ದಾರೆ.

ಸಿರಿಧಾನ್ಯ ನಡಿಗೆಯನ್ನು ನಗರದಲ್ಲಿ ಎಪಿಎಂಸಿ ವೃತ್ತದಿಂದ ಆರಂಭಿಸಿ ತರಕಾರಿ ಮಾರುಕಟ್ಟೆ, ದರ್ಗಾ ಮಸೀದಿ, ಬಸ್ ನಿಲ್ದಾಣ, ಶಾನಭಾಗ ವೃತ್ತ ಹಾಗೂ ಜಿಲ್ಲಾ ಕ್ರೀಡಾಂಗಣದವರೆಗೆ ಜಾಥಾ ಹಮ್ಮಿಕೊಳ್ಳಲಾಗಿರುತ್ತದೆ.

ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com

ಮಕ್ಕಳ ಮೇಲಿನ ದೌರ್ಜನ್ಯ ನಿಲ್ಲಲಿ

ಮಕ್ಕಳ ಹಿತ ರಕ್ಷಣೆಗೆ ಅಧಿಕಾಗಳು ಎಚ್ಚೆತ್ತುಕೊಳ್ಳಿ : ಶಶಿಧರ ಕೊಸಂಬೆ

ಹಂಪಿ ಟೈಮ್ಸ್ ಹೊಸಪೇಟೆ

ಮಕ್ಕಳ ಹಿತ ರಕ್ಷಣೆಗೆ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಕಾರ್ಯಪ್ರವೃತ್ತರಾಗಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೊಸಂಬೆ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ "ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ" ಶೀರ್ಷಿಕೆ ಅಡಿಯಲ್ಲಿ ಆರ್.ಟಿ.ಇ ಅನುಷ್ಠಾನದ ಕುರಿತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಿದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು. ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕುಗಳ ಕಾಯ್ದೆ 2009 ಮತ್ತು ಮಕ್ಕಳ ರಕ್ಷಣ ನೀತಿ 2016 ಕಾಯ್ದೆಯ ಬಗ್ಗೆ ನಾವು ನಡೆಸುವ ಕಾರ್ಯಕ್ರಮಗಳಲ್ಲಿ ಮತ್ತು ಕಾರ್ಯಗಾರದಲ್ಲಿ ಕಾಯ್ದೆಗಳ ಮಾಹಿತಿಯನ್ನು ತಿಳಿಸುತ್ತೇವೆ. ಅದರೂ ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಬೇಸರದ ಸಂಗತಿ. ಸರ್ಕಾರಿ ಶಾಲೆಯಲ್ಲಿ ಕಲಿಯುವಂತಹ ಮಕ್ಕಳ ಸಂಖ್ಯೆ ಬಹಳ ಕಡಿಮೆಯಾಗುತ್ತಿದೆ, ಬಾಲ್ಯವಿವಾಹ ಸಂಖ್ಯೆಯು ಸಹ ಹೆಚ್ಚಾಗುತ್ತಿದೆ. ಬಾಣಂತಿಯರ ಮತ್ತು ನವಜಾತ ಶಿಶುಗಳ ಮರಣದ ಸಂಖ್ಯೆಯು ಹೆಚ್ಚಾಗುತ್ತಿದೆ. ಹೀಗಾಗಿ ಮಕ್ಕಳು ಶಿಕ್ಷಣದಲ್ಲಿ ಅಭಿವೃದ್ಧಿಯಾದಲ್ಲಿ ಮಾತ್ರ ದೇಶದ ಅಭಿವೃದ್ಧಿ ಆಗುತ್ತದೆ. ಆದ್ದರಿಂದ ಮಕ್ಕಳ ಸುಸ್ಥಿರ ಅಭಿವೃದ್ಧಿ ಬಹಳ ಮುಖ್ಯವಾದದ್ದು ಮತ್ತು ರಾಜ್ಯ, ಜಿಲ್ಲೆ, ತಾಲೂಕು, ಗ್ರಾಮಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ರಕ್ಷಣಾ ಸಮಿತಿ ಅನುಷ್ಠಾನವಾಗಿ ಸಭೆಗಳು ನಡೆಯಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಮಾತನಾಡಿ ಬಾಲ್ಯವಿವಾಹ ನಿಷೇಧ ಕಾಯ್ದೆ ಚಾರಿಯಲ್ಲಿದ್ದರೂ ಬಾಲ್ಯವಿವಾಹಗಳು ಅಲ್ಲಲ್ಲಿ ನಡೆಯುತ್ತಲಿವೆ. ತಪ್ಪಿತಸ್ಥರ ವಿರುದ್ಧ ಕಠಿಣವಾದ ಶಿಕ್ಷೆಯಾಗಬೇಕು. ಈ ಹಿನ್ನೆಲೆಯಲ್ಲಿ ಸಮಾಜದ ಒಂದು ಜವಬ್ದಾರಿಯುತ ಸ್ಥಾನದಲ್ಲಿರುವ ನಾವುಗಳು ಮಕ್ಕಳಿಗೆ ನ್ಯಾಯ ಒದಗಿಸಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಲೀಂ ಪಾಷ, ಜಿ.ಪಂ ಉಪ ಕಾರ್ಯದರ್ಶಿ ಭೀಮಣ್ಣ ಲಾಳಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೆಂಕ ಟೇಶ ರಾಮಚಂದ್ರಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸುದೀಪ್ ಕುಮಾರ್ ಉಂಕಿ ಮತ್ತು ಕೊಪ್ಪಳದ ಹರೀಶ್ ಜೋಗಿ ಉಪನ್ಯಾಸ ನೀಡಿದರು.

ಆನಂದ ಬಾಣ



ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

ಉಪ ಲೋಕಾಯುಕ್ತರಿಂದ ದೂರುಗಳ ವಿಚಾರಣೆ । ಕಾಲಮಿತಿಯಲ್ಲಿ ಇನ್ನುಳಿದವು ಪ್ರಕರಣ ವಿಲೇವಾರಿ

87 ವಿವಿಧ ಬಗೆಯ ಪ್ರಕರಣ ಇತ್ಯರ್ಥ

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿಕೆ

ಹಂಪಿ ಟೈಮ್ಸ್ ಬಳ್ಳಾರಿ

ಉಪ ಲೋಕಾಯುಕ್ತ ಕಾರ್ಯ ವ್ಯಾಪ್ತಿಗೆ ಒಳಪಡುವ ಜಿಲ್ಲೆಯ ಒಟ್ಟು 274 ಪ್ರಕರಣಗಳಲ್ಲಿ 87 ವಿವಿಧ ಬಗೆಯ ಹಲವು ಪ್ರಕರಣಗಳನ್ನು ದೂರುದಾರರು ಮತ್ತು ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸಿ ಇತ್ಯರ್ಥ ಪಡಿಸಲಾಗಿದೆ ಎಂದಯ ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಹೇಳಿದರು.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಎರಡು ದಿನಗಳ ದೂರು/ಅಹವಾಲು ಸ್ವೀಕಾರ ಮತ್ತು ವಿಚಾರಣೆಯಲ್ಲಿ 177 ಹೊಸ ದೂರುಗಳ ವಿಚಾರಣೆ ಕೈಗೊಳ್ಳಲಾಗಿತ್ತು. ಅದರಲ್ಲಿ 68 ದೂರುಗಳನ್ನು ವಿಲೇವಾರಿ ಗೊಳಿಸಲಾಗಿದೆ. 97 ಬಾಕಿ ಇರುವ ದೂರುಗಳ ವಿಚಾರಣೆಯಲ್ಲಿ 19 ದೂರು ಇತ್ಯರ್ಥ ಪಡಿಸಲಾಗಿದೆ ಎಂದು ಅವರು ತಿಳಿಸಿದರು.

ಉಪ ಲೋಕಾಯುಕ್ತ ವ್ಯಾಪ್ತಿಗೆ ಸಲ್ಲಿಕೆಯಾಗಿರುವ ದೂರುಗಳ ಸಂಬಂಧ ಸಮಸ್ಯೆಗಳಿಗೆ ಕಲ್ಪಿಸುವುದು ಲೋಕಾಯುಕ್ತದ ಉದ್ದೇಶವಾಗಿದೆ ಎಂದು ತಿಳಿಸಿದರು.

ಬಳ್ಳಾರಿ ಜಿಲ್ಲೆಯಲ್ಲಿ ಜ.16 ರಿಂದ 18 ರವರೆಗೆ ಮೂರು ದಿನಗಳ ಕಾಲ ವಿವಿಧೆಡೆ ಅನೀರಿಕ್ಷಿತ ಭೇಟಿ ನಡೆಸಿ ಅಲ್ಲಿನ ಸ್ಥಿತಿ-ಗತಿ ಪರಿಶೀಲನೆ ನಡೆಸಿ ಸೂಕ್ತ ಸಲಹೆ-ಸೂಚನೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ ಎಂದರು.

ಗುರುವಾರ (ಜ.16 ರಂದು) ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಯಾರ್ಡ್ (ಎಪಿಎಂಸಿ), ವೇಣಿವೀರಾಪುರ ಗ್ರಾಮದ ಬಳಿಯ ಘನ ತ್ಯಾಜ್ಯ ವಿಲೇವಾರಿ ಘಟಕ, ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ, ಬಳ್ಳಾರಿ ತಾಲ್ಲೂಕು ಕಚೇರಿ, ಜಿಲ್ಲಾ ಆಸ್ಪತ್ರೆ, 100 ಹಾಸಿಗೆಗಳ ತಾಯಿ ಮತ್ತು ನವಜಾತ ಶಿಶುಗಳ ಆಸ್ಪತ್ರೆ, ವಿಮ್ಸ್ ಆಸ್ಪತ್ರೆ, ಪ್ರಾದೇಶಿಕ ಸಾರಿಗೆ ಕಚೇರಿ, ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿ-ಗತಿ ಪರಿಶೀಲನೆ ನಡೆಸಲಾಗಿದೆ ಎಂದರು.

ಶುಕ್ರವಾರ (ಜ.17 ರಂದು) ನಗರದ ಅನಂತಪುರ ರಸ್ತೆಯ 30 ಎಂಎಲ್‌ಡಿ ಎಸ್.ಟಿ.ಪಿ 7 ನೇ ಹಂತ ಪ್ರೈಮರಿ ಟ್ರೀಟ್‌ಮೆಂಟ್, ಮುಂಡರಿಗಿಯ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ವಲಯ, ಬಂಡಿಮೋಟ್‌ನ ಕರ್ನಾಟಕ ಆಹಾರ ಉಗ್ರಾಣ ನಿಗಮದ ದಾಸ್ತಾನು ಉಗ್ರಾಣ ಘಟಕ-2 ಭೇಟಿ ನೀಡಲಾಯಿತು ಎಂದರು.

ಶನಿವಾರ (ಜ.18 ರಂದು) ನಗರದ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ವಸತಿ ಶಾಲೆ, ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ-2, ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಮೂಲ ಸೌಕರ್ಯಗಳು ಒದಗಿಸುವಂತೆ ಸೂಚಿಸಲಾಗಿದೆ ಎಂದರು.

ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ.ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್. ಹೊಸಮನೆ, ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಸೇರಿದಂತೆ ಮತ್ತಿತರರು ಇದ್ದರು.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿ

ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ । ಸ್ಪರ್ಧಾತ್ಮಕ ಪರೀಕ್ಷೆ

ಹಂಪಿ ಟೈಮ್ಸ್ ಬಳ್ಳಾರಿ

ನಗರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಜ.19 ಮತ್ತು 25 ರಂದು ವಿವಿಧ ಇಲಾಖೆಗಳ ಗ್ರೂಪ್ 'ಬಿ' ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರ ಸುತ್ತಲೂ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ 2023ರ ಕಲಂ 163 ರ ಮೇರೆಗೆ ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಜ.19 ರಂದು ನಗರದ 12 ಪರೀಕ್ಷಾ ಕೇಂದ್ರಗಳಲ್ಲಿ ಮತ್ತು ಜ.25 ರಂದು 11 ಪರೀಕ್ಷಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಇರುವ ಜೆರಾಕ್ಸ್, ಇಂಟರ್‌ನೆಟ್ ಸೆಂಟರ್‌ಗಳು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಲು ಆದೇಶಿಸಿದ್ದು, ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದ್ದಾರೆ.

॥ ಶ್ರೀ ಮಹಾಸತಿ ಪ್ರಸನ್ನಃ ॥

ಮಾದೂರು

ಶ್ರೀ ಮಹಾಸತಿ ದೇವಿ ಜಾತ್ರೆ

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಮಾದೂರು ಗ್ರಾಮದಲ್ಲಿ
ದಿನಾಂಕ: 20 ಮತ್ತು 21 ನೇ ಜನವರಿ 2025 ರಂದು ಜರುಗುವ
ಶ್ರೀ"ಮಹಾಸತಿ ದೇವಿ"ಯ ಜಾತ್ರೆಗೆ ಆಗಮಿಸುವ ಸಮಸ್ತ ಭಕ್ತಾಧಿಗಳಿಗೆ

ಹೃದಯಪೂರ್ವಕ ಸ್ವಾಗತ ಸುಸ್ವಾಗತ

-: ಸ್ವಾಗತ ಹಾಗೂ ಶುಭ ಕೋರುವವರು :-

ಮಾದೂರು ಗ್ರಾಮದ ಸಮಸ್ತ ದೈವಸ್ತರು, ಹ.ಬೊ.ಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ

ಊಹಾ ಪತ್ರಿಕೋದ್ಯಮ ಅಪಾಯಕಾರಿ : ಸಿಎಂ

■ ಹಂಪಿ ಟೈಮ್ಸ್ ತುಮಕೂರು

ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ. ಪತ್ರಿಕಾ ವೃತ್ತಿ ಉದ್ಯಮ ಆದ ಕೂಡಲೇ ಇದರ ಉದ್ದೇಶಗಳು ಬದಲಾಗುತ್ತವೆ.

ವಸ್ತು ಸ್ಥಿತಿ ಜೊತೆಗೆ ಮೌಲ್ಯಧಾರಿತ ಸುದ್ದಿ ಇಂದಿನ ಅಗತ್ಯ. ಊಹಾ (ಕಲ್ಪಿತ) ಪತ್ರಿಕೋದ್ಯಮ ಅಪಾಯಕಾರಿ ಎಂದು ಸಿ.ಎಂ. ಸಿದ್ದರಾಮಯ್ಯ ಅವರು ಕರೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘ ತುಮಕೂರು ಸಿದ್ಧಾರ್ಥ ತಾಂತ್ರಿಕ ವಿಶ್ವ ವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಜ್ಯ ಪತ್ರಕರ್ತರ 39ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಂವಿಧಾನದ ಆಶಯಗಳನ್ನು ಈಡೇರಿಸುವುದೇ ಪತ್ರಿಕಾ ವೃತ್ತಿಯ ಕರ್ತವ್ಯ. ಧ್ವನಿ ಇಲ್ಲದವರ ಪರವಾಗಿ ವೃತ್ತಿ ಇದ್ದಾಗ ಸಮಾಜಕ್ಕೆ ಅನುಕೂಲ. ಸಮಾಜದಲ್ಲಿರುವ ಮೇಲು, ಕೆಳ ಜಾತಿಗಳ ನಡುವಿನ ತಾರತಮ್ಯ ಮತ್ತು ಅಸಮಾನತೆ ಕೊನೆಯಾಗುವ ದಿಕ್ಕಿನಲ್ಲಿ ಕರ್ತವ್ಯ ನಿರ್ವಹಿಸಿ ಎಂದು ಕರೆ ನೀಡಿದರು.

ಕೆ.ವಿ.ಪ್ರಭಾಕರ್ ಅವರಿಗೆ ಅಭಿನಂಧಿಸಿದ ಸಮ್ಮೇಳನ

ರಾಜ್ಯದ ಪತ್ರಕರ್ತ ಸಮುದಾಯದ ವೃತ್ತಿಪರ ಸಮಸ್ಯೆಗಳಿಗೆ ಅತ್ಯಂತ ಸಹೃದಯತೆಯಿಂದ ಸ್ಪಂದಿಸಿ, ಪರಿಹಾರ ಒದಗಿಸಿಕೊಡುತ್ತಿರುವುದರ ಜೊತೆಗೆ ಸಮ್ಮೇಳನದ ಯಶಸ್ಸಿಗೆ ಸಕಲ ರೀತಿಯಲ್ಲಿ ಸಂಪೂರ್ಣ ಸಹಕಾರ ನೀಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಸಮ್ಮೇಳನ ವಿಶೇಷ ಅಭಿನಂದನೆ ಸಲ್ಲಿಸಿತು.

ನಿಮ್ಮ ವಿಶೇಷ ಸಂಚಿಕೆ ನೀವೂ ಓದಿ: ಈಗ ವೇದಿಕೆಯಲ್ಲಿ ಬಿಡುಗಡೆಯಾದ ನಿಮ್ಮದೇ ವಿಶೇಷ ಸಂಚಿಕೆ ನೀವೂ ಓದಿ. ಪತ್ರಕರ್ತರ ಕರ್ತವ್ಯ , ಸವಾಲುಗಳ ಪಟ್ಟಿ ಇದೆ. ಅದನ್ನು ಓದಿ, ಪಾಲಿಸಿ. ಜನ ಪತ್ರಕರ್ತರ ಮೇಲೆ ನಂಬಿಕೆ ಇಟ್ಟಿದ್ದಾರೆ. ಮೌಢ್ಯದ ಸುದ್ದಿಗಳನ್ನು , ಚರ್ಚೆಗಳನ್ನು ನಡೆಸಿ ನೋಡುಗರ, ಓದುಗರ ದಾರಿ ತಪ್ಪಿಸಬೇಡಿ. ವಿಜ್ಞಾನ, ತಂತ್ರಜ್ಞಾನದ ವೇಗದಲ್ಲೇ ಪತ್ರಿಕೋದ್ಯಮ ಬೆಳೆಯುತ್ತಿದೆ. ಇದು ಅವಕಾಶ, ಸವಾಲು ಎರಡೂ ಆಗಿದೆ. ದೇಶದ ಪ್ರತಿಯೊಬ್ಬರೂ ಸಂವಿಧಾನ ಓದಬೇಕು. ಆಗ ಹಕ್ಕು–ಕರ್ತವ್ಯ ಎರಡೂ ಗೊತ್ತಾಗುತ್ತದೆ. ನಿಮ್ಮದು ಶಕ್ತಿಯುತ ಮಾಧ್ಯಮ. ಜನ ನಿಮ್ಮ ಕಡೆ ನೋಡ್ತಾ ಇದ್ದಾರೆ. ಈ ಎಚ್ಚರಿಕೆ ಸದಾ ಇರಲಿ ಎಂದರು.

ಕೆಲವೇ ದಿನದಲ್ಲಿ ಬಸ್ ಪಾಸ್: ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಸದ್ದದಲ್ಲೇ ನಿಮ್ಮ ಕೈ ಸೇರಲಿದೆ, ಪತ್ರಕರ್ತರ ಕುಟುಂಬಕ್ಕೆ ಆರೋಗ್ಯ ವಿಮೆ ನೀಡುವ ಬಗ್ಗೆ ತೀರ್ಮಾನ ಮಾಡಲಾಗುವುದು. ಪತ್ರಕರ್ತರ ಮಾಸಾಶನವನ್ನೂ 3 ಸಾವಿರದಿಂದ 12 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಗೃಹ ಸಚಿವ ಜಿ.ಪರಮೇಶ್ವರ್, ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿ ಜಿಲ್ಲೆಯ ಶಾಸಕರುಗಳು ಹಾಗೂ ಹಲವು ಪ್ರಮುಖರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೊದಲಿಗೆ ಸಮ್ಮೇಳನದ ಆವರಣದಲ್ಲಿ ಆಯೋಜಿಸಿದ್ದ ಸ್ಟಾಲ್ ಗಳನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು ಮಹಿಳಾ ಸ್ವ ಸಹಾಯ ಸಂಘಗಳು ಸಿದ್ದಪಡಿಸಿದ ತಿಂಡಿ ಸವಿದರು.

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಹಿರಿಯರ ಅನುಭವಗಳ ಮಕ್ಕಳಿಗೆ ಭವಿಷ್ಯ ರೂಪಿಸುವ ಬೆಳಕಾಗಲಿ. ಹಿರಿಯರಿಗೆ ಮಕ್ಕಳ ಆಶ್ರಯ ನೆಮ್ಮದಿಯ ನೆರಳಾಗಲಿ. ಬದುಕು ಎಲ್ಲರಿಗೂ ಒಂದೇ. ಎಲ್ಲರಿಗೂ ವೃದ್ಧಾಪ್ಯ ಬಂದೇ ಬರುತ್ತದೆ.....

ನಿವೃತ್ತಿ - ವೃದ್ಧಾಪ್ಯ ಜೀವನದ ಸುತ್ತಮುತ್ತ

ನಿವೃತ್ತಿ ಎಂದರೆ ವಿಮುಕ್ತನಾಗುವುದು ಬಿಡುಗಡೆ ಹೊಂದುವುದು ವಿಶ್ರಾಂತಿ ಪಡೆಯುವುದು ಎಂಬುದಾಗಿದೆ. ಈ ನಿವೃತ್ತಿ ಎಂಬುದು ಕೇವಲ ಸರ್ಕಾರಿ, ಸಹಕಾರಿ ಖಾಸಗಿ ಸಂಘ–ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಮಾತ್ರ ಅನ್ವಯಿಸುತ್ತದೆ ಎಂಬುದು ಬಹುಜನರ ತಿಳುವಳಿಕೆ. ಆದರೆ ವೃದ್ಧಾಪ್ಯ ಅಥವಾ ಮುಪ್ಪು ಯಾರಿಗೂ ಹೊರತಾಗಿಲ್ಲ. ವಯಸ್ಸಾದವರೆಲ್ಲರಿಗೂ ಅನ್ವಯಿ ಸುತ್ತದೆ. (ರಾಜಕಾರಣಿಗಳನ್ನು ಹೊರತುಪಡಿಸಿ) ಈ ನಿವೃತ್ತಿಯನ್ನು ಕೊಡುವ ಉದ್ದೇಶ ಮನುಷ್ಯನಿಗೆ ವಯಸ್ಸಾದಂತೆಲ್ಲ ಶಕ್ತಿ ಆಸಕ್ತಿ ಕುಂದುವುದರಿಂದ ಅವನಿಗೆ ವಹಿಸಿದ ಕೆಲಸ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗದು ಎನ್ನುವುದಾಗಿದೆ. ಅಲ್ಲದೆ "ಪೂರ್ವಜನ್ಮ ಕೃತಂ ಪಾಪಂ, ವೃದ್ಧಾಪ್ಯ ವ್ಯಾಧಿ ರೂಪೇಣ ಭಾರತ"ಎಂಬ ಶಾಸ್ತ್ರದಂತೆಕೆಲವರುರೋಗಪೀಡಿತವಾಗುವುದರಿಂದ ವಿಶ್ರಾಂತಿ ಅಗತ್ಯವೆಂಬುದು ಇನ್ನೊಂದು ಕಾರಣ. ಕೇವಲ ತನ್ನ ವೃತ್ತಿಯಿಂದ ಅಥವಾ ದುಡಿಮೆ ಮಾರ್ಗದಿಂದ ಬಿಡುಗಡೆ ಹೊಂದಿದರೆ ಸಾಲದು. ತನ್ನ ಸಂಸಾರದ ಜವಾಬ್ದಾರಿಯಿಂದಲೂ ಬಿಡುಗಡೆ ಹೊಂದಿದಾಗ ಮಾತ್ರ ಅದೊಂದು ಅರ್ಥಪೂರ್ಣ ನಿವೃತ್ತಿ ವಿಶ್ರಾಂತಿ ಎನ್ನಬಹುದು. ಏಕೆಂದರೆ ನಿವೃತ್ತಿಯಿಂದ ಎಷ್ಟೋ ಜನ ಚಿಂತೆಗೊಳಗಾಗುವುದನ್ನು ಕಾಣುತ್ತೇವೆ. ಹಾಗೂ ಸಂಸಾರದ ತಾಪತ್ರಯಗಳಿಂದ ಪುನಃ ದುಡಿಯುವುದನ್ನು ನೋಡುತ್ತೇವೆ.

ವೃದ್ಧಾಪ್ಯ ಕಾಲದಲ್ಲಿ ಶರೀರ ದಿನೇ ದಿನೇ ಕುಸಿಯುತ್ತಿದ್ದು ಪರಾವಲಂಬಿಗಳಾಗುವ ಕಾರಣ ವೃದ್ಧಾಪ್ಯ ಜೀವನ ಹಲವರಿಗೆ ಸುಗಮ ದಾರಿಯಲ್ಲ. ಆದ್ದರಿಂದ ನಿವೃತ್ತಿಯಿಂದ ಹತಾಶರಾಗದೆ ಉತ್ಸಾಹ, ಲವಲವಿಕೆ, ಚೈತನ್ಯವನ್ನು ತಂದುಕೊಳ್ಳಬೇಕು. "ಧೈರ್ಯಂ ಸರ್ವತ್ರ ಸಾಧನಂ" "ಏನೇ ಬರಲಿ ಭಗವಂತನ ದಯೆ ಇರಲಿ" ಎಂಬ ಆತ್ಮವಿಶ್ವಾಸದಲ್ಲಿ ಮುಂದುವರಿಯಬೇಕು. ಸುಖ ದುಃಖ ಕಷ್ಟ ನಷ್ಟಗಳನ್ನು ಸಮಚಿತ್ತದಿಂದ ನಿಭಾಯಿಸುವ ಗುಣವನ್ನು ಬಳಸಿ ಕೊಳ್ಳಬೇಕು. ಇಲ್ಲದಿದ್ದಲ್ಲಿ ಮನೋರೋಗಿಗಳಾಗಿ ಇನ್ನು ಕಷ್ಟಗಳಿಗೆ ಈಡಾಗುವ ಸಂಧರ್ಭಗಳು ಹೆಚ್ಚು. ಇಂದು ಬದಲಾಗುತ್ತಿರುವ ಜೀವನ ಶೈಲಿಯಲ್ಲಿ ಯಾರು ಯಾರನ್ನು ಆಕ್ಷೇಪಿಸುವಂತಿಲ್ಲ. ಅವರದೇ ಆದ ಜೀವನ ಶೈಲಿಯಲ್ಲಿ ಬಾಳಲು ಇಚ್ಛಿಸುತ್ತಾರೆ. ಪರಿಸ್ಥಿತಿಯು ಹಾಗೆ ಇದೆ. ಸಂಬಂಧಗಳು ಕುಸಿದು ಹೋಗುತ್ತಿವೆ. ತಂದೆ ತಾಯಿ, ಅಣ್ಣ, ಅಕ್ಕ, ತಂಗಿ ವಾತ್ಸಲ್ಯ ಗೌರವ ಮರೆಯಾಗುತ್ತಿವೆ ಈ ಕಾರಣದಿಂದಾಗಿಂತೋ ಎಂದು ವಿಭಕ್ತ ಕುಟುಂಬಗಳು ಹೆಚ್ಚುತ್ತಿದೆ. ಈಗ ಎಲ್ಲವೂ ವ್ಯವಹಾರ.

ವೃದ್ಧರನ್ನು ಕೆಲವು ಮಕ್ಕಳು ನೋಡುವ ದೃಷ್ಟಿಕೋನವೇ ಬೇರೆ.

"ವಿತ್ತೇನ ಹೀನ ಪರುಷಂತ್ಯಜಯಂತಿ ದಾರಾಶ್ಚ, ಪುತ್ರಾಶ್ಚ, ಸಹೋದ ರಾಶ್ಚ ತಂವಿತ್ತಾವಂತ ಪುನರೇವ ಯಾಂತಿ ವಿತ್ತಂಹಿ ಲೋಕೆ ಪುರುಷಸ್ಯ ಬಂಧು"

ಎಂಬ ಶಾಸ್ತ್ರದಂತೆ ಹಣವಿದ್ದರೆ ಮಾತ್ರ ಎಲ್ಲರೂ, ಇಲ್ಲದಿದ್ದರೆ ಎಲ್ಲರೂ ದೂರವಾಗುತ್ತಾರೆ. ಎಷ್ಟೋ ಮಕ್ಕಳು ತಂದೆಯ ನಿವೃತ್ತಿಯಿಂದ ಬಂದ ಹಣವನ್ನು ಏನೋ ನೆಪ ಹೇಳಿ ಪಡೆದು ತನ್ನ ಆಸ್ತಿ ಆದಾಯವನ್ನು ಹೆಚ್ಚಿಸಿಕೊಂಡು ಹೆತ್ತವರನ್ನು ಕಷ್ಟಕ್ಕೀಡುಮಾಡುವ ಹಾಗೂ ತಂದೆ ತಾಯಿಗಳನ್ನು ಹಂಚಿಕೊಂಡು ಸಾಕುವ ಮತ್ತು ವೃದ್ಧಾಶ್ರಮಗಳಿಗೆ ದೂಡುವವರಿದ್ದಾರೆ. ಈಗಲಂತೂ ಹಣ ಆಸ್ತಿ ಗೋಸ್ಕರ ಸಾಯಿಸುವುದಕ್ಕೂ ಹಿಂಜರಿಯುತ್ತಿಲ್ಲ. ಬಹುಶಃ ಇದರಿಂದಾಗಿಯೇ the real life begins after sixty ಎಂಬ ಮಾತು ಬಂದಿದೆ ಈ ನಿಟ್ಟಿನಲ್ಲಿ ನಮ್ಮ ಪೂರ್ವಜರೇ ಜಾಣರು ಕಾರಣ ಈ ಸ್ಥಿತಿಯನ್ನರಿತ ಅವರು ವಯಸ್ಸಾದ ನಂತರ ವಾನಪ್ರಸ್ಥ ಆಶ್ರಮ ಬಯಸಿ ಕಾಡಿಗೆ ಹೋಗುತ್ತಿದ್ದರು. ಮತ್ತು ಪುಣ್ಯಕ್ಷೇತ್ರ ತೀರ್ಥಯಾತ್ರೆಗೆ ಹೋಗುತ್ತಿದ್ದದು ಪುರಾಣಗಳಿಂದ ತಿಳಿಯುತ್ತೇವೆ.

ಅಂದಾಕ್ಷಣ ಎಲ್ಲಾ ಮಕ್ಕಳು ಕೆಟ್ಟವರೆಂದು ಹೇಳಲಾಗದು. ಹೆತ್ತವರ ಬಗ್ಗೆ ಒಲವು ಇರುವವರು ಇದ್ದಾರೆ. ಅಲ್ಲಿ ನಿವೃತ್ತರು ಕೂಡ ತಮ್ಮ ಗತವೈಭವದ ಜೀವನ ಅಹಂ ದರ್ಪ ಸ್ವಾರ್ಥ ಇಡೀ ಸಂಸಾರದ ಆಡಳಿತ ತಮ್ಮ ಕೈಯಲ್ಲಿ ಇರಬೇಕೆಂಬ ಬಯಕೆ ಕೋಪ ಅರಿಷಡ್ವರ್ಗಗಳನ್ನು ತ್ಯಜಿಸಿ "ಕಾಲಾಯ ತಸ್ಮೈನಮಃ" ಎಂಬಂತೆ ಬದಲಾದ ಕಾಲಕ್ಕೆ ಮತ್ತು ಮನೆಯ ಮಕ್ಕಳ ಪರಿಸ್ಥಿತಿಯನ್ನರಿತು ನಮ್ಮ ಡಿವಿಜಿಯವರು ಹೇಳುವಂತೆ "ಎಲ್ಲರೊಳಗೊಂದಾಗು ಮಂಕುತಿಮ್ಮ" ಎಂಬ ಮಾತಿನಂತೆ ಎಲ್ಲರ ಒಳಗೊಂದಾಗಬೇಕು. ಮನೆಯ ಮಗ ಸೊಸೆ ಇತರರನ್ನು ಪೂರ್ವಗ್ರಹ ಪೀಡಿತರಾಗಿ ನೋಡದೆ (ಒಂದು ಕಾಲಕ್ಕೆ ನಾವು ಕೂಡ ನಮ್ಮಪ್ಪನಂತೆ ಮಗನಾಗಿ ಅತ್ತೆಗೆ ಸೊಸೆಯಾಗಿ ಸವಿದ ಸಿಹಿ ಕಹಿಗಳನ್ನು ನೆನೆದು) love be gets love ಎಂಬಂತೆ ಪ್ರೀತಿ ತೋರಿಸಿ ಪ್ರೀತಿ ಪಡೆಯಿರಿ. ಶಾಂತಿ ಸಹನೆ ನಂಬಿಕೆ ವಿಶ್ವಾಸ ನಿಮ್ಮದಾಗಿರಲಿ. ಇದು ಕೌಟುಂಬಿಕ ಸಾಮರಸ್ಯ ಕಾಪಾಡುವ ದಿವ್ಯಮಂತ್ರ ಹೊರತು ಸೋಲಲ್ಲ. ಸಂಸಾರದಲ್ಲಿ ಯಾರಿಗೆ ಯಾರು ಕೆಟ್ಟವರಲ್ಲ ಅಥವಾ ಕೆಟ್ಟದ್ದನ್ನು ಬಯಸರು. ಕೇವಲ ತಪ್ಪು ಭಾವನೆಗಳು ನಮ್ಮ ಮನಸ್ಸುಗಳನ್ನು ಒಡೆದು ನೆಮ್ಮದಿ ಸಂತೋಷ ನಂಬಿಕೆ ವಿಶ್ವಾಸಗಳನ್ನು ಹಾಳು ಮಾಡುತ್ತವೆ. "ಸಾವಿಲ್ಲದ ಮನೆಯಿಲ್ಲ ಸಮಸ್ಯೆಯಿಲ್ಲದ ಸಂಸಾರವಿಲ್ಲ" ಎಂಬಂತೆ ಸಣ್ಣಪುಟ್ಟ ಸಮಸ್ಯೆಗಳು ಸಹಜ. ಹಿರಿಯರಾದವರು ತಮ್ಮ ಹಿರೇತನದ ಮುತ್ಸದ್ದಿತನದಿಂದ ತಿಳಿಗೊಳಿಸಿದಲ್ಲಿ ಅವರ ಹಿರಿತನ ಕ್ಕೊಂದು ಬೆಲೆ ಗೌರವ ಹೆಚ್ಚಾಗಿ ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾರೆ. ಜೀವನ ದಾರಿ ಸುಗಮವಾಗುತ್ತದೆ. Old age is second childhood ಎಂಬಂತೆ ಮಕ್ಕಳೊಡನೆ ಮಕ್ಕಳಾಗಿ ಮನೆಯನ್ನು ನಂದ ಗೋಕುಲ ಮಾಡಿ ವೃದ್ಧರು ಮಗನ ಅಥವಾ ಮಗಳ ಆಪ್ತರ ಯಾರ ಮನೆಯಲ್ಲಿಯೇ ವಾಸಿಸಲಿ, ಇದು ನಮ್ಮ ಮನೆ. ಅವರ ಕಷ್ಟ ಸುಖಗಳು ನಮ್ಮವು ಕೂಡ ಎಂಬ ವಿಶಾಲ ಮನೋಭಾವ ಅವರದ್ದಾಗಬೇಕು. ಕೇವಲ ಹಿರಿಯರಿಗೆ ಈ ಮಾತಾಗದೇ ಕಿರಿಯರಿಗೂ ಅನ್ವಯಿಸುತ್ತದೆ. ಕಾರಣ ಈಗಿನವರು ಏನನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ. ಏಕೆಂದರೆ ಅವರಿಗೆ ಸಂಸ್ಕಾರಕ್ಕಿಂತ ಸಂಸಾರವೇ ಮುಖ್ಯ. ಜೊತೆಯಲ್ಲಿ ಇರಬೇಕಾದ ಪರಿಸ್ಥಿತಿಯಲ್ಲಿರುವ ನಾವೇ ಹೊಂದಿಕೊಂಡು ಹೋಗಬೇಕು. ಇದು ವರ್ತಮಾನ ಕಾಲದ ಸತ್ಯ. ಇನ್ನು ಮಕ್ಕಳೇ ಇಲ್ಲದ ಅಥವಾ ಗಂಡು ಸಂತಾನವೇ ಇಲ್ಲದವರಿಗೆ, ಹಣವಂತರಿಗೆ, ಸ್ವತಂತ್ರರಾಗಿ ಇರಬೇಕೆನ್ನುವವರಿಗೆ ಅಥವಾ ನಿರ್ಗತಿಕರಿಗೆ ವೃದಾಶ್ರಮಗಳು ಆಶ್ರಯ ನೀಡುತ್ತಿವೆ.

ವೃದ್ಧರು ಎಂದರೆ ವೃದ್ಧಾಶ್ರಮಗಳು ಎನ್ನುವುದು ಮಹಾನಗರಗಳಲ್ಲಿ ಮಾತ್ರವಲ್ಲ ಪ್ರತಿ ಜಿಲ್ಲೆ ತಾಲೂಕುಗಳಲ್ಲಿ ವೃದ್ಧಾಶ್ರಮಗಳು ಸಾಮಾನ್ಯವಾಗಿವೆ. ಸಣ್ಣಪುಟ್ಟ ಸಮಸ್ಯೆಗಳಿಗೆ ವೃದ್ಧಾಶ್ರಮಗಳು ಸರಳ ಉತ್ತರವಾಗಿವೆ. ಹಿರಿಯರ ಅನುಭವಗಳ ಮಕ್ಕಳಿಗೆ ಭವಿಷ್ಯ ರೂಪಿಸುವ ಬೆಳಕಾಗಲಿ. ಹಿರಿಯರಿಗೆ ಮಕ್ಕಳ ಆಶ್ರಯ ನೆಮ್ಮದಿಯ ನೆರಳಾಗಲಿ. ಏಕೆಂದರೆ ಬದುಕು ಎಲ್ಲರಿಗೂ ಒಂದೇ. ಎಲ್ಲರಿಗೂ ವೃದ್ಧಾಪ್ಯ ಬಂದೇ ಬರುತ್ತದೆ. ಎನ್ನುವುದನ್ನು ಮರೆಯಬಾರದು.

ಒಟ್ಟಾರೆ ವೃದ್ಧಾಪ್ಯ ನಿವೃತ್ತಿ ಜೀವನವನ್ನು ಸುಗಮ ದಾರಿಯನ್ನಾಗಿ ಮಾಡಿಕೊಳ್ಳಬೇಕೆಂದರೆ ಆದಷ್ಟು ಪ್ರಾಪಂಚಿಕ ವ್ಯವಹಾರಗಳಿಂದ ದೂರವಿದ್ದು ಶಾಂತಿ ಸಹನೆ ನಿರ್ಮಲ ಮನಸ್ಸು ನಿಸ್ವಾರ್ಥತೆ ಸಹಬಾಳ್ವೆ ಇತ್ಯಾದಿಗಳನ್ನು ಬೆಳೆಸಿಕೊಳ್ಳಬೇಕು. ಧಾರ್ಮಿಕ ಆಧ್ಯಾತ್ಮಿಕ ಸೇವಾ ಮನೋಭಾವನೆಯಿಂದ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘಜೀವಿಗಳಾಗಬೇಕು. ಒಂಟಿಯಾಗಿ ಕುಳಿತಷ್ಟು ಕೆಟ್ಟ ವಿಚಾರಗಳಿಂದ ಶರೀರವಲ್ಲದೆ ತಲೆಯೂ ಕೆಡುತ್ತದೆ. ಮನಸ್ಸಿದ್ದರೆ ಮಾರ್ಗ ಎಂಬಂತೆ ದಾರಿಯನ್ನು ಸುಗಮ ಮಾಡಿಕೊಳ್ಳಬೇಕು. ಗೀತೋಕ್ತಿಯಂತೆ "ಪ್ರಯತ್ನ ಕರ್ಮ ನಮ್ಮದು ಫಲಾಫಲಗಳು ಅವನದ್ದು" ಸಿಹಿ ಕಹಿ ಕಷ್ಟ ನಷ್ಟಗಳ ಮಿಶ್ರಿತವಾದ ಈ ಜೀವನದಲ್ಲಿ ನೊಂದು ಬೆಂದ ಹಿರಿಯ ಜೀವಗಳಿಗೆ ನೋಯಿಸದೆ ನೆಮ್ಮದಿ ಸಿಗಲಿ.

ಜನವರಿ 19ರ ವೇಮನ ಜಯಂತಿ

ಸಂತೆಯೊಳಗಿನ ಸಂತ -ಮಹಾಕವಿ ವೇಮನ

■ ವೀಣಾ ಹೇಮಂತ್ ಗೌಡ ಪಾಟೀಲ್ ಗದಗ

ದಾನ ಕೇಳುವವನು ಧರಣಿಗಧಮನು
ದಾನ ಕೇಳದವನು ದೈವಸಮನು
ದಾನ ಕೊಡದಿರುವವ

ಕವಿ ಮನಸು

ಮುನಿಸು ತರವೇ

ಈ ಕೋಪವೇಕೆ ನನ್ನ ಗೆಳತಿ
ನಗೆಯ ಚೆಲ್ಲು ಮನದ ಒಡತಿ
ಬೆಳಕ ತೋರಿ ನಡೆಸೊ ಪ್ರಣತಿ
ಬಾಳ ಪಯಣದ ನಿಜ ಸಾರಥಿ

ನನ್ನ ಪ್ರೇಮಕ್ಕಿಲ್ಲಿ ಬರವೇ
ಅದರನೂ ಮುನಿಸು ತರವೇ
ಮುಗಿಯದ ಈ ಮೌನ ಸಾಧುವೇ
ನಗೆಯ ನೋಟ ಹರಿಸು ಒಲವೇ

ಸರಸ ವಿರಸ ಇಲ್ಲಿ ಸಹಜ
ನಾನು ಕೂಡ ಒಬ್ಬ ಮನುಜ
ನಿನ್ನ ಮುನಿಸಿಗೆ ನೀಡು ರಜಾ
ಆದರೂ ಹುಸಿಕೋಪವು ಮಜಾ

~ ಚೇತನ ಭಾರ್ಗವ, ಬೆಂಗಳೂರು

ಜ.19 ಜಾಗೃತ್ 5ಕೆ ರನ್

ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ನಿರ್ದೇಶನದಂತೆ ಜಿಲ್ಲಾ ಪೊಲೀಸ್ ವತಿಯಿಂದ ಮಹಿಳಾ ಮತ್ತು ಮಕ್ಕಳ ಸುರಕ್ಷತೆ, ರಸ್ತೆ ಸುರಕ್ಷತೆ, ಸೈಬರ್ ಸುರಕ್ಷತೆ ಬಗ್ಗೆ ಜಾಗೃತಿ ಹಾಗೂ ಡ್ರಗ್ಸ್‌ಮುಕ್ತ ಕರ್ನಾಟಕದ ನಿರ್ಮಾಣಕ್ಕಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಂಗವಾಗಿ ಜ.19 ರಂದು ಬೆಳಿಗ್ಗೆ 06.30 ಗಂಟೆಗೆ ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಿಂದ ಜಾಗೃತ್ 5ಕೆ ರನ್ ಆಯೋಜಿಸಲಾಗಿದೆ.

ಜಾಗೃತ್ 5ಕೆ ರನ್ ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಿಂದ ಆರಂಭಗೊಂಡು ಗಡಿಗಿ ಚನ್ನಪ್ಪ ವೃತ್ತ, ಹಳೇ ತಾಲ್ಲೂಕು ಕಚೇರಿ ರಸ್ತೆ, ಹೆಚ್.ಆರ್.ಗವಿಯಪ್ಪ (ಮೋತಿ ಸರ್ಕಲ್), ವಾಲ್ಮೀಕಿ ಸರ್ಕಲ್, ಕನಕದುರ್ಗಮ್ಮ ದೇವಸ್ಥಾನದಿಂದ ಹಳೇ ಬಸ್ ನಿಲ್ದಾಣ ಮುಖಾಂತರ ಮರಳಿ ಮುನಿಸಿಪಲ್ ಮೈದಾನದ ಆವರಣದವರೆಗೆ ನಡೆಯಲಿದೆ. ಸಾರ್ವಜನಿಕರು ಭಾಗವಹಿಸಬಹುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ.

ಆರ್.ಟಿ.ಇ ಅನುಷ್ಠಾನದ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಶಶಿಧರ ಕೊಸಂಬೆ ಸಮಾಲೋಚನೆ

ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಕರೆತನ್ನಿ : ಕೊಸಂಬೆ

ಜಿಲ್ಲೆಯಲ್ಲಿ 88 ಬಾಲ್ಯವಿವಾಹ ನಡೆದಿದ್ದು, 67 ಪ್ರಕರಣ ದಾಖಲು

ಹಂಪಿ ಟೈಮ್ಸ್ ಹೊಸಪೇಟೆ

ಆರ್.ಟಿ.ಇ ಮಕ್ಕಳ ಶಿಕ್ಷಣ ಹಕ್ಕಾಗಿದ್ದು ಇದರ ಜೊತೆಗೆ ರಕ್ಷಣೆಗೆ ಇರುವ ಕಾನೂನುಗಳ ಬಗ್ಗೆ ಪ್ರತಿ ಶಾಲೆಯಲ್ಲಿ ಜಾಗೃತಿ ಉಂಟು ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೊಸಂಬೆ ಅವರು ಹೇಳಿದರು.

ಅವರು ಶನಿವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿದರು. ಶಾಲೆಯಿಂದ ಹೊರ ಉಳಿದ 3200 ಮಕ್ಕಳನ್ನು ಪುನಃ ಶಾಲೆಗೆ ಕರೆತರುವಲ್ಲಿ ಶಿಕ್ಷಣ ಇಲಾಖೆಯ ತಳ ಮಟ್ಟದ ಅಧಿಕಾರಿಗಳು ಕೆಲಸ ಮಾಡುವ ಮೂಲಕ ಮಕ್ಕಳಿಗೆ ಶೈಕ್ಷಣಿಕ, ಸಾಮಾಜಿಕವಾಗಿ ಬೆಳವಣಿಗೆಗೆ ಸಹಕಾರಿಯಾಗಬೇಕು. ಶಾಲೆಯಲ್ಲಿ ಮಕ್ಕಳಿಗೆ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡಿ ಅಗತ್ಯವಿರುವ ಶೌಚಾಲಯ, ಆಟದ ಮೈದಾನ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಇನ್ನಿತರ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಬೇಕು. ಮಕ್ಕಳ ರಕ್ಷಣಾ ನೀತಿ 2016 ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಅಣಿಯಾಗಬೇಕು. ಮಕ್ಕಳ ಸುರಕ್ಷಾ ಸಮಿತಿ, ಮಕ್ಕಳ ಹಕ್ಕುಗಳ ಸಂಘ, ಮಕ್ಕಳ ಸಹಾಯವಾಣಿ 1098, ಪೊಲೀಸ್ ಸಹಾಯವಾಣಿ 112, ಮಕ್ಕಳ ಸಮಸ್ಯೆಗಳಿಗೆ ಬರವಣಿಗೆ ಮೂಲಕ ಸಲಹಾ ಪೆಟ್ಟಿಗೆಗಳು ಅಳವಡಿಸುವ ಮೂಲಕ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಪೂರಕ ವಾತಾವರಣ ನಿರ್ಮಿಸಬೇಕೆಂದು ತಿಳಿಸಿದರು.

ಸ್ಯಾಟ್ಸ್ ನಿಂದ ಕೇಂದ್ರ ಸರ್ಕಾರದ ಅಪಾರ ತಂತ್ರಾಂಶದಲ್ಲಿ ಬಾಕಿ ಉಳಿದಿರುವ ಮಕ್ಕಳ ದಾಖಲಾತಿಯನ್ನು ಒಂದು ತಿಂಗಳೊಳಗಾಗಿ ದಾಖಲಿಸಬೇಕು. ಜಿಲ್ಲೆಯಲ್ಲಿ 88 ಬಾಲ್ಯವಿವಾಹ ನಡೆದಿದ್ದು, 67 ಪ್ರಕರಣ ದಾಖಲಿಸಲಾಗಿದೆ. ಉಳಿದ 21 ಪ್ರಕರಣಗಳು ಯಾವ ಕಾರಣಕ್ಕಾಗಿ ದಾಖಲಿಸಿಲ್ಲ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಒಂದು ವಾರದೊಳಗೆ ದಾಖಲಿಸಬೇಕು. ವಿಫಲರಾದ ಅಧಿಕಾರಿಗಳ ಮೇಲೆ ಬಾಲ್ಯವಿವಾಹ ನಿಷೇಧ ಕಾಯ್ದೆ ಪ್ರಕಾರ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮಕ್ಕಳಿಗೆ ಸಾರಿಗೆ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಬೇಕು ಎಂದು ಸಂಬಂಧಪಟ್ಟ ಸಿಆರ್‌ಪಿ ಮತ್ತು ಮುಖ್ಯ ಗುರುಗಳ ಸಭೆ ಕರೆಯುವ ಮೂಲಕ ಮಾಹಿತಿ ಪಡೆದುಕೊಂಡು ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥಾಪಕರಿಂದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದರು. ಅಕಾಲಿಕವಾಗಿ ಮರಣ ಹೊಂದುವ ವಿದ್ಯಾರ್ಥಿಗಳ ಕುಟುಂಬದವರಿಗೆ ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆಯಿಂದ ಪರಿಹಾರವನ್ನು ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸುದೀಪ್ ಕುಮಾರ್ ಉಂಕಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಆಸ್ತಿ ತೆರಿಗೆ, ನೀರಿನ ಶುಲ್ಕ ವಸೂಲಾತಿಗೆ ಡೇ-ನಲ್ಮ್ ಯೋಜನೆಯಡಿ ಅರ್ಜಿ ಅಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ತಾಲೂಕಿನ ಕಮಲಾಪುರ ಪುರಸಭೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಹೆಚ್.ಮಹಾಂತೇಶ್ ಬಿಳಿಗಿ ತಿಳಿಸಿದ್ದಾರೆ.

ಕಮಲಾಪುರ ಪುರಸಭೆ ಡೇ-ನಲ್ಮ್ ಅಭಿಯಾನದಡಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳನ್ನು ತೊಡಗಿಸಿಕೊಂಡು ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡೇ-ನಲ್ಮ್ ಯೋಜನೆಯಡಿ ರಚಿಸಲಾಗಿರುವ ಉಳಿತಾಯ ಗುಂಪುಗಳಲ್ಲಿನ ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ಯತೆ ಮೇರೆಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆದಂತವರಿಗೆ ಆದ್ಯತೆ ನೀಡಲಾಗುವುದು. ಇಚ್ಛೆಯುಳ್ಳವಂತಹ ಸ್ವ ಸಹಾಯ ಸಂಘದ ಸದಸ್ಯರುಗಳು ಜ.30 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಡೇ-ನಲ್ಮ್ ಶಾಖೆಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಂಥಾಲಯ ವಿಜ್ಞಾನ ತರಬೇತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ : ವಿನೋದ್‌ರಾಜ್

ಹಂಪಿ ಟೈಮ್ಸ್ ಹೊಸಪೇಟೆ

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ 6 ತಿಂಗಳ ಅವಧಿಯ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲಾ ಪ್ರವೇಶಾತಿಗೆ ಅರ್ಜಿ ಆಹ್ವಾನದ ಅವಧಿಯನ್ನು ಜ.31 ರವರೆಗೆ ವಿಸ್ತರಿಸಲಾಗಿದೆ ಎಂದು ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯ ಅಧಿಕಾರಿ ವಿನೋದ ರಾಜ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು-560001, ದೂ ಸಂ:080-22212128, ಉಪ ನಿರ್ದೇಶಕರ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಡಿ.ಸಿ ಕಚೇರಿಯ ಆವರಣ, ಧಾರವಾಡ-580001. ದೂ.ಸಂ:0836-2442465, ಉಪ ನಿರ್ದೇಶಕರ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಬಾವುಟಗಡ್ಡೆ, ಮಂಗಳೂರು-575003. ದೂ.ಸಂ:0824-2425873, ಉಪ ನಿರ್ದೇಶಕರ ಕಚೇರಿ, ನಗರ ಕೇಂದ್ರ ಗ್ರಂಥಾಲಯ. ಜಗತ್ ವೃತ್ತ, ಕಲಬುರಗಿ-585101. ದೂ.ಸಂ:08472-221543.

ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ಜ.20ರಿಂದ ಜ.27ರವರೆಗೆ ವಾಣಿಜ್ಯ ಪರೀಕ್ಷೆಗಳು: ನಿಷೇಧಾಜ್ಞೆ ಜಾರಿ

ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ (ಡಯಟ್) ಮುನಿರಾಬಾದ್ ವತಿಯಿಂದ 2024-25ನೇ ಸಾಲಿನ ವಾಣಿಜ್ಯ ಪರೀಕ್ಷೆಗಳು ಜ.20ರಿಂದ 27 ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 5ಗಂಟೆವರಿಗೆ ಕೊಪ್ಪಳ ತಾಲೂಕಿನ ಟಿಬಿಪಿ ಮುನಿರಾಬಾದ್ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆಯಲಿದ್ದು, ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲಿನ 200ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

ಕುಂದುಕೊರತೆ ಸ್ವೀಕಾರ ಸಭೆಯಲ್ಲಿ ಕರ್ನಾಟಕ ಉಪಲೋಕಾಯುಕ್ತ ನ್ಯಾ.ಬಿ.ವೀರಪ್ಪ ಸೂಚನೆ

ಅಧಿಕಾರಿಗಳು ಭ್ರಷ್ಟಾಚಾರ ಮುಕ್ತ ಆಡಳಿತ ಸೇವೆ ಜನರಿಗೆ ನೀಡಬೇಕು

ಭ್ರಷ್ಟಾಚಾರ ಕ್ಯಾನ್ಸರ್‌ಗಿಂತಲೂ ಭಯಂಕರ

ಹಂಪಿ ಟೈಮ್ಸ್ ಬಳ್ಳಾರಿ

ಸರ್ಕಾರಿ ನೌಕರರು ಭ್ರಷ್ಟಾಚಾರ ಮುಕ್ತವಾಗಿ ಸಾರ್ವಜನಿಕರಿಗೆ ಆಡಳಿತ ಸೇವೆ ನೀಡಬೇಕು ಎಂದು ಕರ್ನಾಟಕ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಹೇಳಿದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಾರ್ವಜನಿಕ ಅಹವಾಲು/ಕುಂದುಕೊರತೆ ದೂರುಗಳ ಸ್ವೀಕಾರ, ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.ಕ್ಯಾನ್ಸರ್ ಗಿಂತಲೂ ಭಯಂಕರ ಭ್ರಷ್ಟಾಚಾರ ಎನ್ನುವ ಖಾಯಿಲೆ. ಭ್ರಷ್ಟಾಚಾರದಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಹಾಗಾಗಿ ಸರ್ಕಾರಿ ನೌಕರರು ಭ್ರಷ್ಟಾಚಾರ ತೊರೆದು ಪ್ರಾಮಾಣಿಕ ಹಾದಿಯಲ್ಲಿ ನಡೆದು, ತಮ್ಮ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಹಾಗೂ ಮಾನವೀಯತೆ ಪ್ರದರ್ಶಿಸಿ ಅಭಿವೃದ್ಧಿಗೆ ಪೂರಕವಾಗಬೇಕು ಎಂದು ತಿಳಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡುವ ಸವಲತ್ತುಗಳನ್ನು ಪಡೆಯುವ ಹಕ್ಕು ಎಲ್ಲ ನಾಗರಿಕರಿಗೆ ಇದೆ. ಎಲ್ಲರಿಗೂ ಸಮಪಾಲು, ಸಮಬಾಳು ಎಂಬ ಸಂವಿಧಾನದ ಆಶೋತ್ತರದ ಅಡಿಯಲ್ಲಿ ಲೋಕಾಯುಕ್ತ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು, ಜನರಿಗೆ ಸರ್ಕಾರದ ಸೌಕರ್ಯಗಳು ಸಿಗದೇ ಇದ್ದಲ್ಲಿ, ಆ ಸೌಲಭ್ಯಗಳನ್ನು ಕೊಡಿಸುವ ಕೆಲಸವನ್ನು ಸಂಸ್ಥೆ ಮಾಡುತ್ತದೆ ಎಂದು ಅವರು ಹೇಳಿದರು.

ಸ್ವಾತಂತ್ರ್ಯ ಲಭಿಸಿ 75 ವರ್ಷ ಕಳೆದರೂ, ಭ್ರಷ್ಟಾಚಾರದಿಂದ ಸಂವಿಧಾನದ ಹಕ್ಕುಗಳನ್ನು ಹತ್ತಿಕ್ಕುವ ಕೆಲಸವಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ನಾಲ್ಕು ಅಂಗಗಳು ಬಲಿಷ್ಠವಾಗಿ ಕಾರ್ಯನಿರ್ವಹಿಸುತ್ತಿವೆ. ನಾಲ್ಕನೇ ಸ್ತಂಭವಾಗಿರುವ ಮಾಧ್ಯಮಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ್ದಲ್ಲಿ ಸಮಾಜದ ತಪ್ಪುಗಳನ್ನು ತಿದ್ದಲು ಸಾಧ್ಯ. ತನ್ಮೂಲಕ ಪ್ರಾಮಾಣಿಕ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ದೇಶದ ಸೈನಿಕರು ನಿಸ್ವಾರ್ಥದ ಸೇವೆ ನೀಡುತ್ತಿದ್ದಾರೆ. ಆದರೆ ಮಾನವನು ಸ್ವಾರ್ಥದಿಂದ ಪ್ರಕೃತಿ, ಪ್ರಾಣಿ-ಪಕ್ಷಿ ಸಂಕುಲ ನಾಶ ಪಡಿಸುತ್ತಿದ್ದಾನೆ. ನಿಸರ್ಗ ದಲ್ಲಿ ಪಂಚಭೂತಗಳಿಲ್ಲದಿದ್ದರೆ ನಾವಿಲ್ಲ; ಅವುಗಳೇ ತಮ್ಮ-ತಮ್ಮ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವಾಗ ಅಧಿಕಾರಿಗಳು ಪ್ರಾಮಾಣಿಕ ಸೇವೆ ನೀಡಲು ಏನು ಸಮಸ್ಯೆ ಎಂದು ವಿಷಾದ ವ್ಯಕ್ತಪಡಿಸಿದರು.

ಜನರ ಕುಂದುಕೊರತೆಗಳನ್ನು ಬಗೆಹರಿಸು ವುದು, ಭ್ರಷ್ಟಾಚಾರ ನಿರ್ಮೂ ಲನೆ ಮಾಡುವುದು ಲೋಕಾಯುಕ್ತ ಸಂಸ್ಥೆಯ ಕಾರ್ಯೋದ್ದೇಶ. ಸರ್ಕಾರದ ಸೌಲಭ್ಯಗಳನ್ನು ನೀಡುವ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಕರ್ತವ್ಯಲೋಪ ಎಸಗಿದರೆ, ದುರ್ನಡತೆ ಪ್ರದರ್ಶಿಸಿದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ. ದೂರುದಾರರು ಸುಳ್ಳು ಆರೋಪ ನೀಡಿದಲ್ಲಿ ಅಂತಹ ಪ್ರಕರಣಗಳಲ್ಲಿ ಅವರ ವಿರುದ್ಧ ಕಠಿಣ ಕ್ರಮವನ್ನೂ ಸಹ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಸಾರ್ವಜನಿಕರು ಕಾನೂನು ವಿಷಯಗಳ ಕುರಿತು ತಿಳುವಳಿಕೆ ಹೊಂದಬೇಕು. ಪ್ರತಿಯೊಬ್ಬರೂ ಸ್ವಾಭಿಮಾನದ ಬದುಕು ಬದುಕಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅಧ್ಯಕ್ಷತೆ ವಹಿಸಿದ್ದರು. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಗಣ್ಯರನ್ನು ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ವಂದಿಸಿದರು.

ಈ ವೇಳೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ, ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಬಳ್ಳಾರಿ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ರಾಜೇಶ್ ಎನ್.ಹೊಸಮನೆ, ಕ.ಲೋ. ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ
HAMPI TIMES MARGADARSHI
ಪರೀಕ್ಷೆಗೆ ನಾವು ಸಿದ್ಧ 61 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು
https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

ಭೂಗೋಳ ಶಾಸ್ತ್ರ ಅಧ್ಯಾಯ – 27
ಭಾರತದ ಸಾರಿಗೆ ಹಾಗೂ ಸಂಪರ್ಕ

1. 'ಭಾರತದ ಹೆಬ್ಬಾಗಿಲು' ಎಂದು ಕರೆಯಲ್ಪಡುವ ಬಂದರು ಯಾವುದು? ಉತ್ತರ: ಮುಂಬಯಿ ಬಂದರು
2. ಕೊಲ್ಕತ್ತಾ 'ಭಾರತದ ಚಹದ ಬಂದರು' ಎಂದು ಕರೆಯಲ್ಪಡುವ ಬಂದರು ಯಾವುದು? ಉತ್ತರ: ಕೊಲ್ಕತಾ ಬಂದರು
3.ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಎಂದರೇನು?
ಉತ್ತರ: ಕಂಪ್ಯೂಟರ್ ಆಧಾರಿತ- ಭೂಮಿಯ ಮೇಲಿನ ಅಂಕಿ-ಅಂಶಗಳನ್ನು ಸಂಸ್ಕರಿಸುವ ಮತ್ತು ವಿಶ್ಲೇಷಿಸುವ ಒಂದು ವ್ಯವಸ್ಥೆ"ಯಾಗಿದೆ.
4.ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ (GPS) ಎಂದರೇನು?
ಉತ್ತರ: ಭೂಮಿಯ ಮೇಲಿರುವ ವ್ಯಕ್ತಿ ಅಥವಾ ವಸ್ತುವಿನ ದೂರವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ನಿಖರವಾಗಿ ತಿಳಿಸುವ ವ್ಯವಸ್ಥೆ
5. ದೂರ ಸಂವೇದಿ ತಂತ್ರಜ್ಞಾನ (RST)ಎಂದರೇನು?
ಉತ್ತರ: ವಸ್ತುಗಳನ್ನು

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ಹಂಪಿ ಟೈಮ್ಸ್ ಇ-ಪೇಪರ್
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ತುಂಗಭದ್ರಾ ನೀರಿನ ಮಟ್ಟ

ಶನಿವಾರ : 18-01-2025

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1621.67 ಅಡಿ
ಒಳ ಹರಿವು	0 ಕ್ಯುಸೆಕ್
ಹೊರ ಹರಿವು	12011 ಕ್ಯುಸೆಕ್
ಇಂದಿನ ಸಾಮರ್ಥ್ಯ	66.139 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಇಂದಿನ ಮಟ್ಟ	1588.91 ಅಡಿ
ಒಳ ಹರಿವು	0 ಕ್ಯುಸೆಕ್
ಹೊರ ಹರಿವು	0 ಕ್ಯುಸೆಕ್
ಸಾಮರ್ಥ್ಯ	10.143 ಟಿಎಂಸಿ

ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

19-01-2025 – ಭಾನುವಾರ

ತಿಥಿ	: ಚತುರ್ಥಿ
ಪಕ್ಷ	: ಕೃಷ್ಣ
ನಕ್ಷತ್ರ	: ಮಾಘಾ
ಯೋಗ	: ಸೌಭಾಗ್ಯ
ಕರಣ	: ಭವ
ಸೂರ್ಯೋದಯ	: 07:11:30
ಸೂರ್ಯಾಸ್ತ	: 18:03:30
ರಾಹು ಕಾಲ	: 16:43–18:04
ಯಮಘಂಡ ಕಾಲ	: 12:38–13:59
ಗುಳಿಕ ಕಾಲ	: 15:21–16:43

ಜಿಟಿಟಿಸಿ ಕೊಪ್ಪಳ: ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಕೊಪ್ಪಳ,

ಕೊಪ್ಪಳ ತಾಲೂಕಿನ ದದೇಗಲ್‌ನ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿ.ಎಮ್.ಸಿ.ಹೆಚ್&ಇ&ಸಿ ವಿಭಾಗದಲ್ಲಿ ಖಾಲಿ ಇರುವ ಅತಿಥಿ ಉಪನ್ಯಾಸಕರ 03 ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಥಮ ದರ್ಜೆಯಲ್ಲಿ ಬಿ.ಇ ಅಥವಾ ಎಮ್. ಟೆಕ್ ಇನ್ ಎಲೇಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರ್ ಪದವಿ ಹೊಂದಿದ ಆಸಕ್ತ ಆಕಾಂಕ್ಷಿಗಳು ಜನವರಿ 31 ರೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಗದಗ ರೋಡ್, ದದೇಗಲ್ ಕಾರ್ಯಾಲಯ ಅಥವಾ ಮೌನೇಶ್, ವಿಭಾಗದ ಮುಖ್ಯಸ್ಥರು, ಮೊ.ಸಂ: 7507094445 ಇವರನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

ಮಾದೂರಿನ ಮಾಸ್ತಿ ಮಹಾಸತಿ ದೇವಿ

ವರ್ಷಕ್ಕೊಮ್ಮೆ ಜಾತ್ರೆ। ಊರಸುತ್ತ ಬೇಲಿ ಗ್ರಾಮ ಪ್ರವೇಶಕ್ಕೊಂದೆ ದಾರಿ। ಈ ಸಮಯದಲ್ಲಿ ಸತ್ತವರ ಶವವನ್ನು ಸ್ಮಶಾನಕ್ಕೂ ಹೊಯ್ಯಲ್ಲ ಮೇಲ್ಛಾವಣಿ ಇಲ್ಲದ ದೇಗುಲ। ಗ್ರಾಮಕ್ಕೆ ಇನ್‌ಕಮಿಂಗ್ ಅಷ್ಟೇ ಔಟ್‌ಗೋಯಿಂಗ್ ಇಲ್ಲ। ದೇವಿ ಕಲ್ಯಾಣದವರೆಗೆ ಆಚರಣೆ ಕಟ್ಟುನಿಟ್ಟು

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕು ಮಾದೂರು ಗ್ರಾಮದಲ್ಲಿ ಐತಿಹಾಸಿಕ ಕರುಹುಗಳಿವೆ. ಈ ಗ್ರಾಮದಲ್ಲಿ ಮಾಸ್ತಿ ಕಲ್ಲುಗಳು ವೀರಗಲ್ಲುಗಳ ತಾಣವಾಗಿದೆ. ಪ್ರಾಯಶಃ ವಿಜಯನಗರದ ಅರಸರ ಕಾಲದಲ್ಲಿಯೋ ಅಥವಾ ಮೈಸೂರು ಅರಸರ ಕಾಲದಲ್ಲಿ ಈ ಕಲ್ಲುಗಳು ಸ್ಥಾಪಿಸಲಾಗಿವೆ ಎಂದು ಅಂದಾಜಿಸಬಹುದು.

ಮಾದೂರು ಗ್ರಾಮವು ಹಗರಿಬೊಮ್ಮನಹಳ್ಳಿ ತಾಲೂಕಿನಿಂದ ಕೇವಲ 8 ಕಿ.ಮೀ ದೂರವಿದೆ. ಈ ಗ್ರಾಮವು ಗ್ರಾಮ ಪಂಚಾಯ್ತಿ ಕೇಂದ್ರವಾಗಿದೆ. ಸರಕಾರದ ಸೌಲಭ್ಯಗಳು ಇನ್ನೂ ಮರೀಚಿಯಾಗಿ ಉಳಿದುಕೊಂಡಿದೆ. ಸರಿಯಾದ ಸಮಯಕ್ಕೆ ಬಸ್ಸುಗಳು ಸಂಚರಿಸುವುದಿಲ್ಲ, ರಸ್ತೆಗಳೂ ಕಾಲಕಾಲಕ್ಕೆ ಡಾಂಬರೀಕರಣ ಹೊಂದುವುದಿಲ್ಲ. ಸರಕಾರಿ ಆಸ್ಪತ್ರೆ ಗ್ರಾಮದ ಜನರ ಕನಸಾಗಿಯೇ ಉಳಿದಿದೆ. ಪಶು ಆಸ್ಪತ್ರೆ ವಾಚನಾಲಯ, ಬಾಲಕೀಯರ ವಸತಿ ನಿಲಯಗಳ ಕೊರತೆ ಕಾಡುತ್ತಿದೆ. ಮಾದೂರು ಗ್ರಾಮಕ್ಕೆ ಮಾಸ್ತೆಮ್ಮ ದೇವಿ ಅಧಿ ದೇವತೆಯಾಗಿದ್ದು ಪ್ರತಿ ವರ್ಷ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಬಹಳ ವಿಜೃಂಭಣೆ ಸಡಗರ ಸಂಭ್ರಮಗಳಿಂದ ಹಬ್ಬವನ್ನು ಆಚರಿಸುತ್ತಾರೆ.

ವಿಶಿಷ್ಠ ಆಚರಣೆ: ಮಾಸ್ತೆಮ್ಮ ದೇವಿಯ ಹಬ್ಬದ ಆಚರಣೆ ಒಂದು ವಿಶಿಷ್ಟ ರೀತಿ ಹಾಗೂ ಕುತೂಹಲಕಾರಿಯಾಗಿದೆ. ಬನದ ಹುಣ್ಣಿಮೆ ಕಳೆದು ಸೋಮವಾರದಂದು ಗ್ರಾಮದ ಸುತ್ತಾ ಪಾರಿಬೇಲಿ ಹಾಕುತ್ತಾರೆ. ಗ್ರಾಮದ ಜನರು ಊರ ಮುಂದಿನ ಅಗಸೆ ಬಾಗಿಲಿಂದ ಮಾತ್ರ ಓಡಾಡಬಹುದು ಬೇರೆ ದಾರಿಗಳಿಂದ ಓಡಾಡುವಂತಿಲ್ಲ. ಪರ ಊರಿನ ಗ್ರಾಮದ ಜನರು ಗ್ರಾಮದ ಜನರು ಗ್ರಾಮದೊಳಗೆ ಪ್ರವೇಶಿಸುವಂತಿಲ್ಲ. ಸೋಮವಾರ ರಾತ್ರಿ ಗ್ರಾಮದ ಚಾವಡಿಯಲ್ಲಿ ಮುಖಂಡರು ಸೇರುತ್ತಾರೆ. ಮುಂಖಡರು ಸೇರಿದ ನಂತರ ಗ್ರಾಮದೊಳಗೆ ಮಾಸ್ತೆಮ್ಮನ ಸಾರು ಹಾಕಿಸುತ್ತಾರೆ. ಸಾರು ಹಾಕಿದ ನಂತರ ಒಂದು ವಾರದ ಕಾಲ ಬಹಳ ಕಟ್ಟುನಿಟ್ಟಿನ ವಾತಾವರಣ ವಿರುತ್ತದೆ. ಹೆಂಗಳೆಯರು ಹೂ ಮುಡಿಯುವಂತಿಲ್ಲ. ಕುಂಕುಮ ಬೊಟ್ಟು ಇಡುವಂತಿಲ್ಲ, ಗಂಡು ಹೆಣ್ಣು ಯಾದಿಯಾಗಿ ಹೊಸ ಬಟ್ಟೆ ಧರಿಸುವಂತಿಲ್ಲ ಚಪ್ಪಲಿ ಧರಿಸುವುದಿಲ್ಲ, ಹೆಣ್ಣು ಮಕ್ಕಳು ಬಳೆ ಧರಿಸುವಂತಿಲ್ಲ, ಗ್ರಾಮದ ಒಳಗಡೆ ಯಾವುದೇ ವಸ್ತುವಾದರೂ ಬರಬಹುದು ಆದರೆ ಗ್ರಾಮದ ಹೊರಗಡೆ ಯಾವುದೇ ವಸ್ತುಗಳು ಹೊರ ಹೋಗುವಂತಿಲ್ಲ. ಗ್ರಾಮದಲ್ಲಿ ಯಾರಾದರು ಸತ್ತರೆ ಗ್ರಾಮದಲ್ಲಿ ನಿಗದಿ ಪಡಿಸಿದ ಜಾಗದಲ್ಲಿ ಹೂಳುತ್ತಾರೆ.

ಸ್ಮಶಾನಕ್ಕೆ ಒಯ್ಯುವಂತಿಲ್ಲ, ಒಂದುವಾರ ಕಳೆದ ನಂತರ ಮರು ಸೋಮವಾರ ರಾತ್ರಿ ಗ್ರಾಮದ ಚಾವಡಿಯಿಂದ ಮಾಸ್ತೆಮ್ಮ ದೇವರ ಅಕ್ಕಿಪಡೆ ಬಹಳ ಸಂಭ್ರಮ ಸಡಗರದಿಂದ ಡೊಳ್ಳು, ಹಲಗೆ ಕಹಳೆ ಇನ್ನೂ ಮುಂತಾದ ವಾದ್ಯಗಳಿಂದ ಜನರು ಕೇಕೆಗಳಿಂದ ಊರ ಅಗಸೆ ಬಾಗಿಲುನಿಂದ ಮಾಸ್ತೆಮ್ಮ ದೇವಿಯ ಗುಡಿಗೆ ಗುಡಿ ದುಂಬಿಸುತ್ತಾರೆ. ಸೋಮವಾರ ರಾತ್ರಿಯಿಡೀ ದೇವಿಯ ಕಾರ್ಯಕ್ರಮಗಳು ಜರುಗುತ್ತವೆ. ಹತ್ತಾರು ಹಳ್ಳಿಯ ಜನರು ಸಹಸ್ರಾರು ಸಂಖ್ಯೆಯಲ್ಲಿ ಸೇರುತ್ತಾರೆ. ಮಂಗಳವಾರ ಬೆಳಗ್ಗೆ ಗಂಗೆ ಸ್ಥಳಕ್ಕೆಹೋಗಿ ಸಂಪ್ರದಾಯವಾಗಿ ಮಾಸ್ತೆಮ ದೇವಿಯ ಕಲ್ಯಾಣ ಕಾರ್ಯಕ್ರಮ ಮಾಡುತ್ತಾರೆ. ಮಾಸ್ತೆಮ್ಮ ದೇವಿಗೆ ವಸ್ತ್ರಾಭರಣಗಳಿಂದ ಸಿಂಗರಿಸಿ ಚಿನ್ನ ಬೆಳ್ಳಿ ಆಭರಣಗಳನ್ನು ತೊಡಿಸಿ ಅಲಂಕರಿಸಿ ಭಕ್ತರು ಹರಕೆ ತೀರುಸುತ್ತಾರೆ. ಮಂಗಳವಾರ ರಾತ್ರಿ ಮಹಾ ಮಂಗಳಾರತಿ ಮಾಡಿ ಮಾಸ್ತೆಮ್ಮ ದೇವಿಯ ಹಬ್ಬವನ್ನು ಮುಕ್ತಾಯಗೊಳಿಸುತ್ತಾರೆ. ಮೇಲೆ ತಿಳಿಸಿದ ಬರಹವು ಮಾಸ್ತೆಮ್ಮ ದೇವಿಯ ಹಬ್ಬದ ಕಥೆಯಾಗಿದೆ.

ಜನಪದ : ಈಗ ವಾಸ್ತವಾಂಶಗಳನ್ನು ತಿಳಿಸುತ್ತಾ ಹೋಗುತ್ತೇನೆ. ಸುಮಾರು ಕ್ರಿ.ಶ. ಅಂದಾಜು 16-17 ನೇ ಶತಮಾನದಲ್ಲಿ ಮಾದೂರು ಗ್ರಾಮವು ಯಾವುದೇ ಅರಸರ ಆಳ್ವಿಕೆಗೆ ಒಳಪಟ್ಟಿರಬಹುದು ಜನಪದ ಹಾಡುಗಳಿಂದ ಹೆಂಗಳೆಯರು ಹಾಡುವ ಸೋಬಾನ ಪದಗಳಿಂದ ಮಾಸ್ತೆಮ್ಮ ದೇವಿಯ ಹಾಡುಗಳಿಂದ ಇತಿಹಾಸದ ಮೇಲುಕುಗಳನ್ನು ಕಾಣಬಹುದಾಗಿದೆ. ಮಹಾಸತಿ ದೇವಿಯ ಗಂಡ ಮಲ್ಲೋಜನು ಯಾವುದೋ ಅರಸರ ದಂಡಿನಲ್ಲಿ ಸೈನಿಕ ನಾಗಿರುತ್ತಾನೆ. ಯುದ್ಧ ಕಾಲದಲ್ಲಿ ಮಲ್ಲೋಜನು ವೀರ ಮರಣ ಹೊಂದುತ್ತಾನೆ. ವೀರಮರಣ ಹೊಂದಿದ ನಂತರ ಮಲ್ಲೋಜನ ಕುದುರೆ ಮತ್ತು ಅವನ ನಾಯಿ ಸಪ್ಪೆಮೋರೆ ಹಾಕಿಕೊಂಡು ಮಾದೂರು ಗ್ರಾಮಕ್ಕೆ ಬರುತ್ತವೆ. ಕುದುರೆಯ ಕೊರಳಲ್ಲಿ ತಾಮ್ರದ ಹಾಳೆಯ ಫಲಕದಲ್ಲಿ ಮಲ್ಲೋಜ ಇನ್ನಿಲ್ಲ ಎಂದು ಬರಹ ವಿರುತ್ತದೆ. ಮಲ್ಲೋಜನಿಗೆ ಮಾದೂರು ಗ್ರಾಮದಲ್ಲಿ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿರುತ್ತದೆ. ಹೆಂಡತಿ ಹೆಸರು ಅಸ್ಪಸ್ಟವಾಗಿ ತಿಳಿದು ಬರುವುದಿಲ್ಲ, ಹೆಂಡತಿ ವಯಸ್ಸು ಚಿಕ್ಕ ವಯಸ್ಕಳೆಂದು ತಿಳಿದು ಬರುತ್ತದೆ. ತನ್ನ ಗಂಡನ ಕುದುರೆ ಮತ್ತು ನಾಯಿ ಒಂಟಿಯಾಗಿ ಬರುವುದನ್ನು ಸತಿ ಗಮನಿಸುತ್ತಾಳೆ. ಊರ ಹೊರಗಿನ ತಿಪ್ಪೆಗೆ ಕಸ ಒಗೆಯಲು ಸತಿ ಹೋಗಿರುತ್ತಾಳೆ, ಅದೇ ಸಂಧರ್ಭದಲ್ಲಿ ಕುದುರೆ, ನಾಯಿ ಅಲ್ಲಿಗೆ ಧಾವಿಸುತ್ತವೆ ಸತಿಗೆ ಕುದುರೆ ಮತ್ತು ನಾಯಿ ಒಂಟಿಯಾಗಿ ಬಂದಿರುವುದನ್ನು ನೋಡಿ ತನ್ನ ಪತಿ ಯುದ್ಧದಲ್ಲಿ ಮಡಿದಿದ್ದಾನೆ ಎಂದು ಮನದಟ್ಟಾಗುತ್ತದೆ. ದುಃಖ ಮಡುಗಟ್ಟುತ್ತದೆ. ಸತಿ ಯಾವ ಸ್ಥಳದಲ್ಲಿದ್ದಳೋ ಅದೇ ಸ್ಥಳದಲ್ಲಿ ಕುಳಿತುಕೊಂಡು ರೋಧಿಸುತ್ತಾಳೆ. ಊರಿನ ಗ್ರಾಮಸ್ಥರು ಎಷ್ಟು ಸಾಂತ್ವನ ಹೇಳಿದರೂ ತನ್ನ ಮನೆಗೆ ಬಾರಲು ಒಪ್ಪುವುದಿಲ್ಲ. ತಾನಿದ್ದ ಜಾಗದಲ್ಲಿಯೇ ಅಗ್ನಿಕುಂಡ ರಚನೆಮಾಡಿ ಕೊಡಬೇಕೆಂದು ಜನರ ಮುಂದೆ ಹಠ ಹಿಡಿಯುತ್ತಾಳೆ. ಜನರು ಆಕೆಯ ಮಾತಿಗೆ ಮನ್ನಣೆ ಕೊಟ್ಟು ಅಗ್ನಿಕುಂಡ ರಚನೆಮಾಡಿ ಕೊಡುತ್ತಾರೆ. ಸತಿ ಅಗ್ನಿಕುಂಡಕ್ಕೆ ಹಾರಿ ತನ್ನ ಪ್ರಾಣ ತ್ಯಜಿಸುತ್ತಾಳೆ ಸ್ವರ್ಗಕ್ಕೆ ಹೋಗುತ್ತಾಳೆ. ಇದು ಸತಿ ಮಹಾಸತಿಯಾದ ಕಥೆ. ಮಹಾಸತಿ ಆದೊಡನೆ ಮಾಸ್ತಿ ಕಲ್ಲು ಸ್ಥಾಪನೆಯಾಗಿದೆ. ಮಾಸ್ತಿ ಕಲ್ಲಿನಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಯುದ್ಧಕ್ಕೆ ಹೊರಟ ಯೋಧನ ಚಿತ್ರಣವಿದಿ. ಯೋಧನ ಪಕ್ಕದಲ್ಲಿ ಆರತಿ ಎತ್ತಿಕೊಂಡು ಬೀಳ್ಕೊಡಿಗೆ ನೀಡುವ ಹೆಣ್ಣಿನ ಭಂಗಿ ಇದೆ. ಮೇಲುಗಡೆ ಭಾಗದಲ್ಲಿ ಈಶ್ವರ ಸೂರ್ಯ ಚಂದ್ರ ಚಿತ್ರವಿದೆ. ಕೆಳಗಡೆ ಭಾಗದಲ್ಲಿ ಕುದುರೆ ನಾಯಿ ಚಿತ್ರಗಳಿವೆ. ಪ್ರಾಯಶಃ ಮಾಸ್ತಿ ಮಹಾಸತಿ ದೇವಿಯಾಗಿ ಗ್ರಾಮಕ್ಕೆ ಅಧಿ ದೇವತೆಯಾಗಿ ಪೂಜಿಸುವ ಹಾಗೂ ಪ್ರತಿ ವರ್ಷಕ್ಕೊಮ್ಮೆ ಹಬ್ಬವಾಗಿ ಆಚರಿಸುವ ಪದ್ಧತಿ ನಮ್ಮ ನಾಡಿನಲ್ಲಿಯೇ ಅಪರೂಪವಾಗಿ ಕಾಣಿಸುತ್ತದೆ ಎಂದೆನೆಸು ತ್ತದೆ. ಈ ಮಹಾಸತಿ ದೇವಿಯ ಗುಡಿಗೆ ಮೇಲ್ಛಾವಣಿ ಇರುತವುದಿಲ್ಲ. ಸುತ್ತಲೂ ಗರ್ಭ ಗುಡಿಯಿದೆ. ಮಾದೂರು ಗ್ರಾಮದಲ್ಲಿ ಮಾಸ್ತೆಪ್ಪ, ಮಾಸ್ತೆಮ್ಮ, ಮಹೇಶಮ್ಮ, ಮಹೇಶಪ್ಪ ಎನ್ನುವ ಹೆಸರಿನ ಬಹಳ ಜನಗಳ ಹೆಸರುಗಳು ಇವೆ. ಮಾದೂರು ಗ್ರಾಮದ ಅಕ್ಕ ಪಕ್ಕದ ಹೊಲಗಳಲ್ಲಿ ಮಾಸ್ತಿಕಲ್ಲುಗಳು, ವೀರಗಲ್ಲುಗಳು ಕಾಣ ಬರುತ್ತವೆ. ಒಂದೆರಡು ಶಿಲೆಗಳಲ್ಲಿ ಹಳೆಗನ್ನಡದಲ್ಲಿ ಬರೆದ ಶಾಸನಗಳು ಕಾಣುತ್ತವೆ. ಶಾಸನಗಳು ಬಹಳ ಹಳೆಯದಾಗಿರುವುದರಿಂದ ಶಬ್ದಗಳು ಅಸ್ಪಷ್ಟವಾಗಿ ಕಾಣುತ್ತವೆ. ಜನ ಪದಗಳಲ್ಲಿ ಆ ಶಿಲೆಗಳಿಗೆ ಬೇರೆ ಬೇರೆಯ ಹೆಸರುಗಳು ರೂಪಾಂತರ ಗೊಂಡಿವೆ. ಈ ಗ್ರಾಮಕ್ಕೆ ಇತಿಹಾಸ ತಜ್ಞರು ಒಮ್ಮೆ ಭೇಟಿನೀಡಿ ಶೋಧನೆ ಕೈಗೊಂಡರೆ ಇತಿಹಾಸದ ಚಿತ್ರಣ ಹೊರ ಬರುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ, ಈಗಲಾದರು ಪುರಾತತ್ವ ಇಲಾಖೆ ಮತ್ತು ಇತಿಹಾಸ ತಜ್ಞರು ಭೇಟಿಕೊಟ್ಟು ಸಂಶೋಧನೆ ಮಾಡುತ್ತಾರೆಂದು ಆಶಿಸುತ್ತೇನೆ.

■ **ಮಹೇಶ್ ಮಾದೂರು**
ಮೊ : 9591982410

ವಿದ್ಯಾರ್ಥಿಗಳಲ್ಲಿ ತಗ್ಗದ ರಕ್ತಹೀನತೆ

ಶಾಸಕ ಎನ್.ಟಿ.ಶ್ರೀನಿವಾಸ ಕಳವಳ। ಶಿಕ್ಷಣಕ್ಕೆ ಆದ್ಯತೆ ಶೀಘ್ರ ಸಿಹಿ ಸುದ್ದಿ

■ **ಹಂಪಿ ಟೈಮ್ಸ್ ಕೊಟ್ಟೂರು**

ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿಗಳಲ್ಲಿ ರಕ್ತ ಹೀನತೆ ಸಾಮಾನ್ಯವಾಗಿದೆ, ಶಾಲೆಯಲ್ಲಿ ಮೊಟ್ಟೆ, ಬಿಸಿಊಟ ಕೊಟ್ಟರೂ, ಇದು ಕಮ್ಮಿಯಾಗುತ್ತಿಲ್ಲ ಈ ಬಗ್ಗೆ ಮುಂಜಾಗ್ರತೆವಹಿಸಬೇಕು ಎಂದು ಶಾಸಕ ಡಾ. ಎನ್.ಟಿ. ಶ್ರೀನಿವಾಸ ಹೇಳಿದರು.

ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ ಕೊಟ್ಟೂರು ತಾಲೂಕಿನ ಹುಣಸಿಕಟ್ಟೆ ಗ್ರಾಮದಲ್ಲಿ ಶನಿವಾರ ಕೂಡ್ಲಿಗಿ ಕ್ಷೇತ್ರದ 50 ಶಾಲೆಗಳಲ್ಲಿ ಶಿಥಿಲಗೊಂಡ ಕೊಠಡಿಗಳನ್ನು 2 ಕೋಟಿ ರೂ. ವೆಚ್ಚದ ದುರಸ್ತಿ ಕಾರ್ಯಕ್ಕೆ ಚಾಲನೆ ನೀಡಿದರು.

ಈ ವೇಳೆ ಶಾಸಕರನ್ನು ವಿಶ್ ಮಾಡಲು ಬಂದ ವಿದ್ಯಾರ್ಥಿಗಳನ್ನು ಅವಲೋಕಿಸಿ, ಚಪ್ಪಲಿ ಇಲ್ಲದೆ ಓಡಾಡುವುದು. ಶೌಚಾಲಯ ವ್ಯವಸ್ಥೆ, ಸ್ವಚ್ಚತೆ ಹಾಗೂ ಪೌಷ್ಠಿಕಾಂಶ ಆಹಾರದ ಕೊರತೆಯಿಂದ, ರಕ್ತ ಹೀನತೆ ಉಂಟಾಗಿ ಮುಖದಲ್ಲಿ ಬಿಳಿ ಕಲೆಗಳು ಕಂಡು ಬರುತ್ತೆ ಈ ಬಗ್ಗೆ ಅಗತ್ಯಕ್ರಮವಹಿಸಬೇಕು.ಸರ್ಕಾರದಲ್ಲಿ ಹಣವಿಲ್ಲ ಎಂಬ ಮಾತುಗಳು ಶುದ್ದ ಸುಳ್ಳು. ಇದುವರೆಗೂ ಕೂಡ್ಲಿಗಿ ಕ್ಷೇತ್ರಕ್ಕೆ 500 ಕೋಟಿ. ರೂ.ಗೂ ಹೆಚ್ಚು ಅನುದಾನ ಬಂದಿದೆ. ಪ್ರಸ್ತುತ 35 ಕೋಟಿ ರೂ. ಅನುದಾನ ಬಂದಿದ್ದು. ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಮಾಡಲು ಟೈಮ್ ಸಿಗುತ್ತಿಲ್ಲವೆಂದರು.

ಕಾಂಗ್ರೆಸ್ ಸರ್ಕಾರದಲ್ಲಿ ಯಾವ ಗೊಂದಲವಿಲ್ಲ, ಅದನ್ನು ವಿಶ್ಲೇಷಣೆ ಮಾಡ ಲಾರೆ, ಅಷ್ಟು ದೊಡ್ಡವನು ನಾನಲ್ಲ. ನನ್ನ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತ್ರ ಕೇಳಿ, ಉತ್ತರಿಸಬಲ್ಲೆ. ನಮ್ಮದು ಹಿಂದುಳಿದ ಕ್ಷೇತ್ರ. ಇದರ ಸರ್ವಾಂಗೀಣ ಅಭಿವೃದ್ಧಿಗೆ ನನ್ನ ಮೊದಲ ಅದ್ಯತೆ ಎಂದು ಚುಟುಕಾಗಿ ಉತ್ತರಿಸಿದರು. ಸ್ಮಶಾನ ಒತ್ತುವರಿಗೆ ಅವಕಾಶ ನೀಡುವುದಿಲ್ಲ. ನಮ್ಮ ಕ್ಷೇತ್ರದಲ್ಲಿ 24 ಸ್ಮಶಾಣಗಳ ಅಭಿವೃದ್ಧಿ ಯಾಗಬೇಕಿದೆ. ಅದಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ ಅಹಮ್ಮದ್ ಅವರಿಗೆ 5 ಕೋಟಿ ರೂ. ಕೇಳಿದ್ದೇನೆ. ಅನುದಾನ ಕೊಡಲು ಸಚಿವರು ಸಮ್ಮಿತ್ತಿಸಿದ್ದಾರೆ ಎಂದ ಅವರು, ಮಾರ್ಚ, ಏಪ್ರಿಲ್ ವೇಳೆಗೆ ನಮ್ಮ ಕ್ಷೇತ್ರದ ಶಿಕ್ಷಣ ಇಲಾಖೆ ಕುರಿತು ಸಿಹಿ ಸುದ್ದಿ ಕೊಡುವುದಾಗಿ ತಿಳಿಸಿದರು.

ರಾಜ್ಯ ಬೀಜ ನಿಗಮದ ನಿರ್ದೇಶಕ ಸಾವಜ್ಜಿ ರಾಜೇಂದ್ರ ಪ್ರಸಾದ್, ಬಿ.ಡಿ.ಸಿ.ಸಿ. ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಂ. ಗುರುಸಿದ್ದನಗೌಡ, ಜಿಪಂ ಮಾಜಿ ಸದಸ್ಯ ಕಾನಾಮಡುಗು ಶಶಿಧರ ಸ್ವಾಮಿ, ತಹಶೀಲ್ದಾರ್ ಜಿ.ಕೆ. ಅಮರೇಶ, ತಾಪಂ ಇಒ ಅನಂದ ಬಿ, ಹುಲುಗಪ್ಪ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶರಣಪ್ಪ, ಭಂಡಾರಿ ಸಿದ್ದೇಶ, ಎಸ್, ಮಂಜುನಾಥ ಗೌಡ, ಪಿ. ಸವಿತಾ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ, ಕೊಟ್ರಮ್ಮ, ಷಣ್ಮುಖಪ್ಪ, ಪಿ.ಎಂ. ಲಕ್ಷ್ಮೀ ಮುಂತಾದವರಿದ್ದರು.

ಚಿರತೆ ದಾಳಿ-ಮೂರು ಟಗರು ಸಾವು

■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲ್ಲೂಕಿನ ಗುಡೇಕೋಟೆ ಗ್ರಾಮದ ಹೊರ ವಲಯದಲ್ಲಿ ಚಿರತೆ ದಾಳಿಯಿಂದಾಗಿ ಮೂರು ಟಗರುಗಳು ಮೃತಪಟ್ಟ ಘಟನೆ ಶನಿವಾರ ನಡೆದಿದೆ.

ಗ್ರಾಮದ ಹೊನ್ನೂರಮ್ಮ ಅವರು ರಿಯಾಜ್ ಅವರ ಜಮೀನಿನಲ್ಲಿ ಕಳೆ ತ